ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರದವರು ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿ ನಂತರ ಕೇವಲ ಎರೆಡು ವರ್ಷದ ಟಿಸಿಹೆಚ್‌ಪಾಸ್ ಮಾಡಿದವರಿಗೆ ಶಿಕ್ಷಕರ ಹುದ್ದೆಗೆ ಸೇರಲು ವಯೋಮಿತಿಯನ್ನು 40 ವರ್ಷಕ್ಕೆ ಏರಿಸಿದ್ದಾರೆ. ಕಳೆದ 5-6 ವರ್ಷಗಳಿಂದ ಈ ಹುದ್ದೆಗಳಿಗೆ ನೇಮಾಕಾತಿ ಮಾಡಿಲ್ಲವೆಂಬ ಕಾರಣದಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಆದರೆ ಪದವಿಯನ್ನು ಪಡೆದುಕೊಂಡು ಕಳೆದ 7-8 ವರ್ಷಗಳಿಂದ ಯಾವ ನೌಕರಿ ಇಲ್ಲದೆ ಇರತಕ್ಕ ನಿರುದ್ಯೋಗಿಗಳು ನಮ್ಮ ರಾಜ್ಯದಲ್ಲಿ ಸಹಸ್ರಾರು ಜನ ಇದ್ದಾರೆ. ಕಳೆದ 7-8 ವರ್ಷಗಳಿಂದ ಯಾವುದೇ ನೇಮಕಾತಿಗಳನ್ನು ಸರ್ಕಾರದವರು ಮಾಡದೆ ಇರುವುದರಿಂದ, ಇವರುಗಳು ವಯೋಮಿತಿಯನ್ನು ಮೀರಿರುತ್ತಾರೆ. ಆದ್ದರಿಂದ, ಎಲ್ಲಾ ನಿರುದ್ಯೋಗಿಗಳನ್ನು ಒಂದೇ ದೃಷ್ಟಿಯಿಂದ ನೋಡುವ ಸಲುವಾಗಿ ಸರ್ಕಾರದವರು ಎಲ್ಲಾ ಹುದ್ದೇಗಳಿಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳ ವಯೋಮಿತಿಯನ್ನು 40 ವರ್ಷಗಳಿಗೆ ಏರಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆ ಕೊಡಬಯಸುತ್ತೇನೆ.

ರಾಜ್ಯ ಸರ್ಕಾರಿ ಸೇವೆಯ ನೇಮಕಾತಿಗೆ (ಕರ್ನಾಟಕ ಸಿವಿಲ್ ಸೇವೆ ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 6ರಡಿಯಲ್ಲಿ ನಿಗದಿಪಡಿಸಿದ ವಯೋಮಿತಿ ಕೆಳಗಿನಂತಿದೆ:

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಗುಂಪು ಎ	- 35 ವರ್ಷಗಳು
ಹಿಂದುಳಿದ ಗುಂಪು - ಬಿ, ಸಿ ಮತ್ತು ಡಿ	33 ವರ್ಷಗಳು
ಸಾಮಾನ್ಯ ಅರ್ಹತೆ ಮತ್ತು ಹಿಂದುಳಿದ ಗುಂಪು- ಇ	30 ವರ್ಷಗಳು

ಈ ಮುಂಚೆ ಮೇಲೆ ಕಾಣಿಸಿದ ಗರಿಷ್ಠ ವಯೋಮಿತಿಯನ್ನು ಹೆಚ್ಚಿಸಬೇಕೆನ್ನುವ ಪ್ರಸ್ತಾವನೆಯನ್ನು ಸರ್ಕಾರ ಹಲವಾರು ಬಾರಿ ಅದರ ಸಾಧ್ಯ ಸಾಧ್ಯತೆಗಳನ್ನು ಪರಿಶೀಲಿಸಿ ವಯೋಮಿತಿಯನ್ನು ಮೂರು ವರ್ಷಗಳಷ್ಟು ಹೆಚ್ಚಿಸಲು ಈಗ ನಿರ್ಧರಿಸಿದೆ.

(4) ಬೆಳುವಾಯಿ ಮತ್ತು ಶಿರ್ತಾಡಿ ಮಂಡಲದ ಖಜಾನಾಧಿಕಾರಿ ಮತ್ತು ಕಾರ್ಯದರ್ಶಿಯವರ ಮೇಲಿರುವ ಅಪಾದನೆಯ ವಿಚಾರಣೆ ಬಗ್ಗೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಬೆಳುವಾಯಿ ಮತ್ತು ಶಿರ್ತಾಡಿ ಮಂಡಲದಲ್ಲಿ ಖಜಾನಾಧಿಕಾರಿ ಮತ್ತು ಮಂಡಲ ಕಾರ್ಯದರ್ಶಿಗಳು ಜೊತೆಯಾಗಿ ಸೇರಿಕೊಂಡು ಸುಮಾರು 12 ಲಕ್ಷ ಹಣದ ವಂಚನೆಯಾಗಿದ್ದು ಈ ಮಂಡಲಗಳ ಕಾರ್ಯಕಲಾಪಗಳನ್ನು ನಡೆಸುವುದೇ ಬಹಳ ತೊಂದರೆಯಾಗಿರುತ್ತದೆ. ಪ್ರಥಮ ಹಂತದ ಮೇಲ್ವಿಚಾರಣೆಯಲ್ಲಿ ಖಜಾನಾಧಿಕಾರಿ ಹಾಗೂ ಕಾರ್ಯದರ್ಶಿಗಳು ತಪ್ಪಿತಸ್ಥರೆಂದು ತಿಳಿದು ಬಂದು ಅವರನ್ನು ಕೆಲಸದಿಂದ ಅಮಾನತು ಮಾಡಲಾಗಿದೆ. ಆದರೆ ಈ ಬಗ್ಗೆ ನಡೆಯಬೇಕಾದ ವಿಚಾರಣೆ ಬಹಳ ನಿಧಾನವಾಗಿ ಸಾಗುತ್ತಾ ಇದ್ದು ಇದರಿಂದ ತಪ್ಪಿತಸ್ಥರಿಗೆ ಅನುಕೂಲವಾಗುವ ಸಂಭವವಿದೆ. ಆದುದರಿಂದ ಈ ವಿಚಾರಣೆ ಆದಷ್ಟು ತ್ವರಿತದಲ್ಲಿ ಸಾಗಬೇಕಾಗಿದೆ. ಮಾತ್ರವಲ್ಲದೆ ಈ ಬಗ್ಗೆ ನಡೆಯಬೇಕಾದ ಪೋಲೀಸು ಕೇಸು ಸಹ ಈತನಕ ಸರಿಯಾದ ರೀತಿಯಲ್ಲಾಗದೇ ತೊಂದರೆಯಾಗಿದೆ. ಇದರಿಂದಾಗಿ ಎರಡು ಮಂಡಲಗಳು ತಮ್ಮ ನಿತ್ಯ ಕಾರ್ಯಗಳನ್ನು ಮಾಡುವಾಗಲಿ ಹಣ ಪಾವತಿ ಮಾಡಿದಂತಾಗಿದ್ದು ಮಂಡಲದ ಚಟುವಟಿಕೆಗಳು ಕಾರ್ಯಗತವಾಗದಂತಾಗಿದೆ. ಆದುದರಿಂದ ಇದರ ವಿಚಾರಣೆಯನ್ನು

ಆದಷ್ಟು ಬೇಗನೆ ನಡೆಸುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಇದರ ವಿಚಾರಣೆಯು ಯಾವ ಹಂತದಲ್ಲಿದೆ ಎಂದು ತಿಳಿಯಬಯಸುತ್ತೇನೆ. ಮತ್ತು ಮಂಡಲದ ನಿತ್ಯ ಕಾರ್ಯಗಳನ್ನು ನಡೆಸುವಂತೆ ಸರಕಾರ ಯಾವ ಕಾರ್ಯಕ್ರಮ ಕೈಗೊಳ್ಳುತ್ತದೆಂದು ತಿಳಿಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸದಸ್ಯರು ಎತ್ತಿದಂತಹ ಸಮಸ್ಯೆಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್, ಪಶುಸಂಗೋಪನಾ ಮಂತ್ರಿಗಳ ಗಮನಕ್ಕೆ ತಂದು ಆದಷ್ಟು ಜಾಗ್ರತೆ ಈ ಒಂದು ವಿಚಾರಣೆ ತನಿಖೆ ಮುಗಿಯುವ ಹಾಗೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

(5) ಬೈಲಹೊಂಗಲದ ತಹಶೀಲ್ದಾರ್‌ರವರ ಕಛೇರಿಯನ್ನು ಆಧುನೀಕರಣಗೊಳಿಸುವ ಬಗ್ಗೆ .

ಶ್ರೀ ಶಿವಾನಂದ ಹೆಚ್.ಕೌಜಲಗಿ : ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಹಶೀಲ್ದಾರರ ಕಚೇರಿ ಕಟ್ಟಡವು ಸನ್ 1906ನೇ ಸಾಲಿನಲ್ಲಿ ಕಟ್ಟಲಾಯಿತು. ಈ ಕಟ್ಟಡ ಬಹಳ ಶಿಥಿಲಗೊಂಡಿದ್ದು ಕೂಡಲೇ ರಿಪೇರಿಯನ್ನು ಆಧುನಿಕರಿಸುವ ಸಲುವಾಗಿ ಮಾಡುವುದು ಅತೀ ಅವಶ್ಯ ಜರೂರು ಇದೆ. ತಹಶೀಲ್ದಾರ್ ಚೇಂಬರ್‌ನಲ್ಲಿ ಯೂರಿನಲ್ಸ್ ಇರುವುದಿಲ್ಲ ಹಾಗೂ ಸ್ಟಾಫ್ ಮೆಂಬರಿಗೆ ಸಹ ಯೂರಿನಲ್ಸ್ ಸಹ ಇರುವುದಿಲ್ಲ, ಇಂತಹ ಸ್ಥಿತಿಯಲ್ಲಿ ತಹಶೀಲ್ದಾರ ಕಚೇರಿ ನಡೆಯುತ್ತಿದೆ ಎಂದು ತಿಳಿಸಲು ವಿಷಾದವೆನಿಸುತ್ತದೆ. ಆದ್ದರಿಂದ ಸನ್ 1991-92ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ 10 ಲಕ್ಷ ರೂಪಾಯಿಗಳನ್ನು ಆಧುನೀಕರಣದ ಸಲುವಾಗಿ ಒದಗಿಸಬೇಕೆಂದು ನಾನು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಹಶೀಲ್ದಾರರ ಕಚೇರಿ ಕಟ್ಟಡದ ಆಧುನೀಕರಣದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಲೋಕೋಪಯೋಗಿ ಇಲಾಖೆಯನ್ನು ಹಾಗೂ 1991-92ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ 10ಲಕ್ಷ ರೂಪಾಯಿಗಳ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಸಹ ಕೋರಲಾಗಿದೆ. ನಂತರ ಆ ಇಲಾಖೆಗಳು ಒಪ್ಪಿಗೆ ಕೊಟ್ಟ ಬಳಿಕ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

(6) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ನರಸಣ್ಣ ಜಾತಿಯವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು.

ಶ್ರೀ ಎ.ರುಕ್ಮಯ್ಯ ಪೂಜಾರಿ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 800 ಜನ ಸಂಖ್ಯೆಯುಳ್ಳ ಒಂದು ಸಣ್ಣ ಗುಂಪು ಇದೆ. ಅವರನ್ನು ಸಾಮಾನ್ಯವಾಗಿ ನರ್ಸಣ್ಣ ಜಾತಿ ಎಂಬುದಾಗಿ ಗುರುತಿಸಲಾಗುತ್ತದೆ. ಅವರೆಲ್ಲರೂ ಅತೀ ಬಡವರು, ಅವರಿಗೆ ಇದುವರೆಗೂ ಸರಕಾರದಿಂದ ಯಾವುದೇ ಜಾತಿ ದೃಢ ಪತ್ರಿಕೆ ಸಿಕ್ಕಿರುವುದಿಲ್ಲ. ಆದ್ದರಿಂದ ಸರಕಾರದ ಪ್ರತಿಯೊಂದು ಸವಲತ್ತುಗಳಿಂದರೂ ವಂಚಿತರಾಗಿದ್ದಾರೆ. ಈ ಬಗ್ಗೆ ಆ ಸಮಾಜದ ಮುಖಂಡರು ಕರ್ನಾಟಕ ಸರಕಾರಕ್ಕೆ ಮನವಿಯನ್ನು ಕೊಟ್ಟು ಪರಿಶಿಷ್ಟ ಪಂಗಡದ ಹಕ್ಕಿ-ಪಿಕ್ಕಿ ಪಂಗಡಕ್ಕೆ ಸೇರಿದವರೆಂದು ಘೋಷಿಸಬೇಕೆಂದು ವಿನಂತಿಯನ್ನು ಮಾಡಿಕೊಂಡಿರುತ್ತಾರೆ. ಕಾರಣ ಈ 2 ಪಂಗಡದವರು ಎಲ್ಲಾ ರೀತಿಯಿಂದಲೂ ಸಮಾನ ರೀತಿಯಲ್ಲಿ ಜೀವಿಸುತ್ತಿದ್ದಾರೆ. ಆದ್ದರಿಂದ ಸರಕಾರ ಈ ಬಗ್ಗೆ ಗಮನ ಹರಿಸಿ ಅತೀ ನಿಕೃಷ್ಟ ಪರಿಸ್ಥಿತಿಯಲ್ಲಿರುವ ಈ ನರಸಣ್ಣ ಜಾತಿಯವರಿಗೆ ಅನುಕೂಲ ಮಾಡಿಕೊಡಬೇಕೆಂದು ಸರಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ....